ಫಿಕ್ಸ್ ಮಾಡಿದರೆ ಒಳ್ಳೆಯದೆಂದು ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ತಾವು ವಿಂಗಿತ ಮತ್ತು ಕೊರತೆ ಜಿಲ್ಲೆಗಳಿಗೆ ಒಂದೇ ರೀತಿಯ ಲೆವಿಯನ್ನು ಫಿಕ್ಸ್ ಮಾಡಿದರೆ ಕೊರತೆ ಜಿಲ್ಲೆಗಳು ಎಲ್ಲಿಂದ ಲೆವಿ ಭತ್ತವನ್ನು ಸಂಗ್ರಹಣೆ ಮಾಡಿ ಕೊಡಬೇಕು ? ಮತ್ತೆ ನಮ್ಮ ಮಾನ್ಯ ಮಂತ್ರಿಗಳು ಈ ಆಹಾರ ಇಲಾಖೆಯನ್ನು ವಹಿಸಿಕೊಂಡ ಮೇಲೆ ಈ ಲೆವಿ ನೀತಿಯನ್ನು ಬಹಳ ಕಟ್ಟು ನಿಟ್ಟಾಗಿ ಪಾಲನೆ ಮಾಡುತ್ತಿದ್ದಾರೆಂದು ಸಹ ನಾನು ಕೇಳಿದ್ದೇನೆ. ಅದೇ ರೀತಿಯಲ್ಲಿ ಇವರು ಆಹಾರ ಪದಾರ್ಥಗಳ ವಿತರಣಾ ವ್ಯವಸ್ಥೆಯನ್ನು ಕೂಡ ಬಹಳ ಚೆನ್ನಾಗಿ ಮಾಡುತ್ತಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದನೆಗಳನ್ನು ಸಲಿಸುತ್ತೇನೆ. ಇದೇ ಸಂದರ್ಭದಲ್ಲಿ ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರಬಯಸುವುದಾದರೆ ನಮ್ಮ ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಸುಮಾರು ಸಾವಿರಾರು ಲಾರಿಗಳ ಮುಖಾಂತರ ಅಕ್ಕಿಯನ್ನು ಸಾಗಾಣಿಕೆ ಮಾಡುತ್ತಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿ ಸೂಕ್ತ ರೀತಿಯ ಬಂದೋಬಸ್ತು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸ್ವಾಮಿ ಅವರು ಕೇರಳ ರಾಜ್ಯಕ್ಕೆ ಅಕ್ಕಿಯನ್ನು ಕಳ್ಳಸಾಗಾಣಿಕೆ ಮಾಡುವುದಕ್ಕೆ ಪೋಲೀಸ್ ಇಲಾಖೆಯ ಅಧಿಕಾರಿಗಳುಕೂಡ ಸಹಾಯ ಮಾಡುತ್ತಿದ್ದಾರೆ. ಅಂಥವರ ಮೇಲೆ ಸರ್ಕಾರದವರು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಕೂಡ ನಾನು ಕೇಳಿಕೊಳ್ಳುತ್ತೇನೆ. ಸ್ವಾಮಿ ಇವತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಜನರ ಪರಿಸ್ಥಿತಿ ಏನಾಗಿದೆ ಎಂದರೆ ಯಾರಾದರೂ ಒಬ್ಬ ವ್ಯಕ್ತಿ ಬಂದು ಒಂದು ನೂರು ರೂಪಾಯಿಗಳು ಬೇಕು ಎಂದು ಕೇಳಿದಾಗ ಆತನಿಗೆ ನಾವು ನೂರು ರೂಪಾಯಿಗಳು ಕೊಡುವುದಕ್ಕೆ ನಮ್ಮ ಹತ್ತಿರ ಹಣ ಇಲ್ಲದಿದ್ದರೂ ಕೂಡ ನಾವು ಬೇರೆ ಯಾರ ಕಡೆಯಿಂದ ಆದರೂ ಸಾಲವನ್ನಾದರೂ ತಂದು ನಮ್ಮ ಮಾನ ಮತ್ತು ಮರ್ಯಾದೆಯನ್ನು ಉಳಿಸಿಕೊಂಡು ಹೋಗುವಂಥ ಪರಿಸ್ಥಿತಿಗೆ ಬಂದಿದ್ದೇವೆ. ಆದ್ದರಿಂದ ಈ ವಿಂಗಿತ ಮತ್ತು ಕೊರತೆ ಜಿಲ್ಲೆಗಳಿಗೆ ಬೇರೆಬೇರೆ ಲೆವಿ ಟಾರ್ಗೆಟ್ ಫಿಕ್ಸ್ ಮಾಡಬೇಕೆಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಸ್ವಾಮಿ ಇವತ್ತು ನಮ್ಮಲ್ಲಿ ಕೆಲವು ಜನ ಏಜೆಂಟರು ಹುಟ್ಟಿಕೊಂಡು ಅವರು ನಮ್ಮ ರಾಜ್ಯದಿಂದ ಕೇರಳ ರಾಜ್ಯಕ್ಕೆ ಅಕ್ಕಿಯನ್ನು ಕಳ್ಳಸಾಗಾಣಿಕೆ ಮಾಡಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿ ಅವರು ದೊಡ್ಡ ದೊಡ್ಡ ಖದೀಮರಾಗುತ್ತಿದ್ದಾರೆ, ಇಂಥವರನ್ನು ಸರ್ಕಾರದವರು ಪತ್ತೆ ಹಚ್ಚಿ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಸರ್ಕಾರದವರು ಬೇಕಾದರೆ ಈ ನಮ್ಮ ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಅಕ್ಕಿಯನ್ನು ಕಳ್ಳ ಸಾಗಾಣಿಕೆ ಮಾಡುವವರನ್ನು ಕಂಡಲ್ಲಿ ಗುಂಡಿಟ್ಟು ಬೇಕಾದರೆ ಕೊಲ್ಲುವಂಥ ಕಾನೂನು ತಂದರೂ ಸಹ ನಾವು ಅದಕ್ಕೆ ಬೆಂಬಲವನ್ನು ಕೊಡುತ್ತೇವೆ. ನಾನು ಒಂದು ಉದಾಹರಣೆಯನ್ನು ಹೇಳಬೇಕಾದರೆ ಒಂದು ಲಾರಿಯಲ್ಲಿ ಅಕ್ಕಿಯನ್ನು ಕೇರಳ ರಾಜ್ಯಕ್ಕೆ ಸಾಗಾಣಿಕೆ ಮಾಡುತ್ತಿರುವಾಗ ಜಾಲಸೂರು ಎಂಬ ಒಂದು ಪಟ್ಟಣದಲ್ಲಿ ಬಿ.ಜೆ.ಪಿ.ಯ ಪಕ್ಷದ ಸಭೆ ನಡೆಯುತ್ತಿದೆ ಎಂದು ಹೇಳಿ ಅವರು ಕೇರಳ ರಾಜ್ಯಕ್ಕೆ ಅಕ್ಕಿಯನ್ನು ತೆಗೆದುಕೊಂಡು ಹೋಗದೆ ಮಂಗಳೂರಿನಲ್ಲಿ ಬಂದು ಮಂಗಳೂರಿನಲ್ಲಿ ಅಕ್ಕಿಯನ್ನು ಮಾರಾಟ ಮಾಡಿಕೊಂಡು ಹೋದಂಥ ಪ್ರಸಂಗಗಳು ನಡೆಯುತ್ತಿವೆ. ಇದನ್ನು ನೋಡಿದರೆ ನಮಗೆ ಏನು ಅನಿಸುತ್ತದೆ ಎಂದರೆ ಅವರು ಪೋಲೀಸಿನವರಿಗೆ ಭಯ ಪಟ್ಟಿಲ್ಲ. ಇಲ್ಲಾ ಇಲಾಖೆಯ ಸಿಬ್ಬಂದಿ ವರ್ಗದವರಿಗೆ ಭಯ ಪಟ್ಟಿಲ್ಲ. ಬಿ.ಜೆ.ಪಿ.ಯ ಸಭೆ ನಡೆಯುತ್ತಿದ್ದುದ್ದರಿಂದ ಅವರು ಈ ದಿವಸ ಕೇರಳ ರಾಜ್ಯಕ್ಕೆ ಅಕ್ಕಿಯನ್ನು ತೆಗೆದುಕೊಂಡು ಹೋಗಲಿಲ್ಲ, ಇದನ್ನು ಮಾನ್ಯ ಮಂತ್ರಿಗಳು ತಪ್ಪಿಸಬೇಕು. ಮತ್ತು ಕೊರತೆ ಮತ್ತು ವಿಂಗಿತ ಜಿಲ್ಲೆಗಳಿಗೆ ಬೇರೆ ಬೇರೆ ಲೆವಿ ಟಾರ್ಗೆಟ್ ಫಿಕ್ಸ್ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ಆ ಖಾತೆಗೆ ಸಂಬಂಧಪಟ್ಟ ಮಂತ್ರಿಗಳು ಇಲ್ಲವೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದರೂ ಕೂಡ ನಾನು ಸಂಬಂಧಪಟ್ಟ ಇಲಾಖೆಯ ಇಲಾಖಾ ಅಧಿಕಾರಿಗಳನ್ನು ಭೇಟಿ ಮಾಡಿ ಆ ಬಗ್ಗೆ ಮಾಹಿತಿಯನ್ನು ತರಿಸಿ ಇವತ್ತು ಈ ಸಭೆ ಮುಗಿಯುವುದಕ್ಕಿಂತ ಮುಂಚಿತವಾಗಿ ನಾನು ಒಂದು ಹೇಳಿಕೆಯನ್ನು ಆ ಬಗ್ಗೆ ಕೊಡುತ್ತೇನೆ.

Sub. 21 Malpractices in KEB Stores Section, Dakshina Kannada.

ಶ್ರೀ ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ವಿಭಾಗದ ಕರ್ನಾಟಕ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಸುಮಾರು ೯ ವರ್ಷಗಳಿಂದ ಸ್ಟೋರ್ ಕೀಪರ್ ಆಗಿ ಕೆಲಸ ಮಾಡುತ್ತಿರುವ ಶ್ರೀ ವಾದಿರಾಜ್ ಎಂಬುವವರು ಆ ಇಲಾಖೆಯಲ್ಲಿ ಸಾಕಷ್ಟು ಅಕ್ರಮ ಅನ್ಯಾಯ ಮತ್ತು ಭ್ರಷ್ಟಾಚಾರಗಳನ್ನು ಮಾಡುತ್ತಿದ್ದಾಗ್ಯೂ ಕೂಡ ಇಲಾಖೆಯವರು ಆತನ ಮೇಲೆ ಇದುವರೆಗೂ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ಸ್ಟೋರ್ಸ್‌ನಲ್ಲಿ ಇರತಕ್ಕಂಥ ವೈರ್, ಸ್ವಿಚ್, ಬಲ್ಬ್ ಇತ್ಯಾದಿ ಸಾಮಾನ್ಯಗಿಗಳು ಬೇಕಾದರೆ ಸಂಬಂಧಪಟ್ಟ ಕಂಟ್ರಾಕ್ಟ್‌ದಾರರು ಆತನಿಗೆ ಏನಾದರೂ ಕಿಮ್ಮತ್ತು ಕೊಟ್ಟರೆ ಮಾತ್ರ ಆತ ಆ ಕಂಟ್ರಾಕ್ಟ್‌ದಾರರಿಗೆ ವೈರು ಮತ್ತು ಸ್ವಿಚ್ ಇತ್ಯಾದಿ ಸಾಮಾನ್ಯಗಳನ್ನು ಕೊಡುತ್ತಾನೆ. ಇಲ್ಲದಿದ್ದರೆ ಸ್ಟಾಕ್ ಇಲ್ಲ ಎಂದು ನೇರವಾಗಿ ಹೇಳಿ ಕಳುಹಿಸಿಕೊಡುತ್ತಾನೆ. ಈ ರೀತಿಯ ಒಂದು ಅವ್ಯವಹಾರ ಸುಮಾರು ೯ ವರ್ಷಗಳಿಂದ ನಡೆಯುತ್ತಿದೆ. ಆದರೆ ಅಲ್ಲಿರತಕ್ಕಂಥ ಸಾಮಾನ್ಯಗಿಗಳನ್ನು ಆತ ಬೇರೆ ಖಾಸಗಿ ಕಂಟ್ರಾಕ್ಟ್‌ದಾರರಿಗೆ ಮಾರಾಟ ಮಾಡಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರವನ್ನು ಮಾಡುತ್ತಿದ್ದಾನೆ. ಆದ್ದರಿಂದ ಸರ್ಕಾರದವರು ಈಗಲಾದರೂ ಆತನ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆಯೇ ? ಮತ್ತೆ ಆತನನ್ನು ಕೆಲಸದಿಂದ ಕೂಡಲೇ ಸಸ್‌ಪೆಂಡ್ ಮಾಡುತ್ತಾರೆಯೇ ಇಲ್ಲವೇ ಆತನ ಮೇಲೆ ಒಬ್ಬ ಉನ್ನತ ಅಧಿಕಾರಿಯ ಮಟ್ಟದಲ್ಲಿ ತನಿಖೆಯನ್ನು ಮಾಡುತ್ತಾರೆಯೇ ? ಎಂಬುದನ್ನು ತಿಳಿಸಬೇಕಾಗಿ ಕೋರುತ್ತೇನೆ.

ಶ್ರೀ ಜೆ. ಎಚ್. ಪಟೇಲ್ (ಮಾನ್ಯ ವಿದ್ಯುಚ್ಛಕ್ತಿ ಖಾತೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಈ ವಿಷಯವನ್ನು ಈಗತಾನೆ ಸರ್ಕಾರದ ಗಮನಕ್ಕೆ ತರುತ್ತಿದ್ದಾರೆ. ಅದನ್ನು ಸರ್ಕಾರದವರು ಕೂಲಂಕುಷವಾಗಿ ಪರಿಶೀಲನೆ ಮಾಡಿ ಸಂಬಂಧಪಟ್ಟ ಅಧಿಕಾರಿಯ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

22 Several fire accidents due to the negligence of fire force unit in Raichur.

ಶ್ರೀ ಸಂಗಮೇಶ್ವರ ಸರ್ದಾರ್.—ಮಾನ್ಯ ಅಧ್ಯಕ್ಷರೆ, ರಾಯಚೂರು ದೊಡ್ಡ ವ್ಯಾಪಾರ ಕೇಂದ್ರ. ಅಲ್ಲಿ ಹತ್ತಿ, ಹರಳು, ಹತ್ತಿಕಾಳು, ಶೇಂಗಾ, ಎಳ್ಳು, ಕುಸುಬಿ ಮತ್ತಿತರ ಪದಾರ್ಥಗಳು ಯಥೇಚ್ಛವಾಗಿ ಮಾರಾಟವಾಗುತ್ತವೆ. ಇಡೀ ದಕ್ಷಿಣ ಭಾರತದಲ್ಲಿ ರಾಯಚೂರು ದೊಡ್ಡ ನಗರವಾಗಿದೆ. ಇತ್ತೀಚೆಗೆ ಎರಡು ಮೂರು ತಿಂಗಳ ಹಿಂದೆ ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಬೆಂಕಿಬಿದ್ದು ೧೫ ಲಕ್ಷ ರೂಪಾಯಿ ಹಾನಿಯಾಗಿದೆ. ಫೈರ್ ಸ್ಟೇಶನ್ ಇದ್ದರೂ ಅಲ್ಲಿ ಸರಿಯಾದ ರೀತಿಯಲ್ಲಿ ಸಲಕರಣೆಗಳು ಇಲ್ಲ. ರಾಯಚೂರು ವ್ಯಾಪಾರ ಕೇಂದ್ರ, ಆಕಸ್ಮಿಕವಾಗಿ ಬೆಂಕಿಯ ಅಪಘಾತವಾದರೆ ಅಲ್ಲಿ ರೈತರಿಗೆ ವ್ಯಾಪಾರಸ್ಥರಿಗೆ ಬಟ್ಟೆ ಮಾಲೀಕರಿಗೆ ಹಾನಿಯಾಗುತ್ತದೆ. ಕೃಷಿ ಮಂತ್ರಿಗಳು, ಉದ್ಯೋಗ ಮಂತ್ರಿಗಳು, ಗೃಹ ಮಂತ್ರಿಗಳು ಇವರಿಗೆಲ್ಲಾ ಸಂಬಂಧಪಟ್ಟದ್ದು ಇದೆ. ವಾಣಿಜ್ಯ ಮಂತ್ರಿಗಳು ಇದರ ಬಗ್ಗೆ ಗಮನ ಕೊಡಬೇಕು. ಅಗ್ನಿಶಾಮಕ ಠಾಣೆ ವ್ಯವಸ್ಥಿತ ರೀತಿಯಲ್ಲಿ ಕೆಲಸಮಾಡುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು).—ಫೈರ್ ಸ್ಟೇಶನ್ ಸರಿಯಾಗಿ ಕೆಲಸಮಾಡುವಂತೆ ಕ್ರಮ ತೆಗೆದುಕೊಳ್ಳುತ್ತೇನೆ. ಅಲ್ಲಿನ ಜನಗಳಿಗೆ ಫೈರ್ ಸ್ಟೇಶನ್‌ನಿಂದ ಯಾವರೀತಿ ಅನುಕೂಲವಾಗಬೇಕೋ ಆ ರೀತಿಯ ಕೆಲಸವನ್ನು ಮಾಡಲು ಆದೇಶವನ್ನು ಅಲ್ಲಿನ ಅಧಿಕಾರಿಗಳಿಗೆ ಕೊಡುತ್ತೇನೆ.

23 Non-receipt of Replies to notices under Rule-334

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ನಮಗಿರತಕ್ಕ ಹಕ್ಕು ಅಂದರೆ, ನಿಯಮ ೩೩೪ರ ಪ್ರಕಾರ ಏನಾದರೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿದೆ. ನಾವು ಆ ಪ್ರಕಾರ ಹಲವಾರು ಸಾರಿ ಹಲವಾರು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಅದರ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳು ಪರಿಶೀಲನೆ ಮಾಡುತ್ತೇನೆ, ಯೋಚನೆ ಮಾಡುತ್ತೇನೆ, ವರ್ತಮಾನವನ್ನು ತರಿಸುತ್ತೇನೆ, ವಿಚಾರಮಾಡುತ್ತೇನೆ, ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆಂದು ಹೇಳಿ ಇದುವರೆಗೆ ನಮಗೆ ಉತ್ತರ ಕೊಟ್ಟಿಲ್ಲ. ಇವತ್ತು ಸಭೆಯು ಮುಕ್ತಾಯವಾಗುತ್ತದೆ ಇವರು ಯಾವಾಗ ಉತ್ತರ